**ಓಂ ಶಾಂತಿ. ಬಾಪ್ ದಾದಾ, ಅವ್ಯಕ್ತ ಮುರಳಿ 16-06-1969.**

(ओम शान्ति, बापदादा. अव्यक्त मुरली 16-06-1969)

***ಅತೀ ದೊಡ್ಡ ತ್ಯಾಗ ಅವಗುಣಗಳ ತ್ಯಾಗ***

(बड़े-से-बड़ा त्याग - अवगुणों का त्याग)

ಎಲ್ಲರೂ, ಯಾವ ಸ್ವರೂಪದಲ್ಲಿ ಕುಳಿತಿರುವಿರಿ? ಸ್ನೇಹರೂಪದಲ್ಲೋ ಶಕ್ತಿರೂಪದಲ್ಲೋ? ಈ ಸಮಯದಲ್ಲಿ ಯಾವ ರೂಪವಿದೆ? ಸ್ನೇಹದಲ್ಲಿ ಶಕ್ತಿಯಿರುತ್ತದೆ. ಎರಡೂ ಜೊತೆಗೆ ಇರಲು ಸಾಧ್ಯವೇ? ಎರಡೂ ರೂಪಗಳಿವೆಯೆಂದು ಏಕೆ ಹೇಳುವುದಿಲ್ಲ. ಬಾಪ್ ದಾದಾರವರ ಜೊತೆಗೆ ಸ್ನೇಹ ಏಕಿದೆ? ಶಿವತಂದೆಯ ಬಿರುದೇನಿದೆಯೋ ಅದರಲ್ಲಿ ಸಮಾನರಾಗಿರುವುದರಿಂದ ಬಾಪ್ ದಾದಾರವರ ಜೊತೆಗೆ ಸ್ನೇಹವಿದೆ. ಮುಖ್ಯ ಬಿರುದು ಯಾವುದು? (ಸರ್ವಶಕ್ತಿವಾನ್) ಕೇವಲ ಸ್ನೇಹವಿದ್ದರೆ ಅದು ಎಂದಿಗಾದರೂ ತುಂಡಾಗಬಹುದು ಆದರೆ ಸ್ನೇಹ ಮತ್ತು ಶಕ್ತಿ ಎರಡೂ ಎಲ್ಲಿ ಜೊತೆಗಿವೆಯೋ ಅಲ್ಲಿ ಆತ್ಮ ಮತ್ತು ಪರಮಾತ್ಮರ ಮಿಲನವೂ ಅವಿನಾಶಿ, ಅಮರವಾಗಿರುತ್ತದೆ. ಆದ್ದರಿಂದ ತಮ್ಮ ಈ ಮಿಲನವನ್ನು ಅವಿನಾಶಿಯಾಗಿಸಿಕೊಳ್ಳಲು ಯಾವ ಸಾಧನ ಬೇಕು? ಸ್ನೇಹ ಮತ್ತು ಶಕ್ತಿಗಳ ಮಿಲನ ತಮ್ಮಲ್ಲಿ ಬೇಕು. ಆಗ ಮಾತ್ರ ಆತ್ಮ ಮತ್ತು ಪರಮಾತ್ಮನ ಮಿಲನವೆಂದು ಹೇಳಲಾಗುವುದು. ಜಾತ್ರೆಯಲ್ಲಿ(ಮೇಳ) ಕುಳಿತುಕೊಂಡಿದ್ದೀರಿ. ಆದರೆ ಅನೇಕರು ಈ ಎರಡರ ಮಿಲನವನ್ನು ಮರೆತಿದ್ದಾರೆ. ಒಳ್ಳೆಯದು,

ಇಂದು ವಿಶೇಷವಾಗಿ ಕುಮಾರಿಯರಿಗೋಸ್ಕರ ಬಂದಿದ್ದೇವೆ. ಇಂದು ಕುಮಾರಿಯರ ಯಾವ ದಿನವಾಗಿದೆ? (ಮಿಲನದ ದಿನ) ತಮ್ಮೆಲ್ಲರ ಫಲಿತಾಂಶವೂ ಬಂದಿದೆ? ತಮ್ಮ ಫಲಿತಾಂಶವನ್ನು ತಾವು ತಿಳಿದುಕೊಂಡಿರುವಿರಾ? ತ್ರಿಕಾಲದರ್ಶಿಗಳಾಗಿರುವಿರಾ? ಈ ಗ್ರೂಪ್ ನ ನಂಬರ್ ಒನ್ ಕುಮಾರಿ ಯಾರಾಗಿದ್ದಾರೆ? (ಚಂದ್ರಿಕಾ) ನಂಬರವನ್ ನ ಮುಖ್ಯ ಕರ್ತವ್ಯ ತಮ್ಮಂತೆ ನಂಬರವನ್ ಮಾಡುವುದಾಗಿದೆ. ಕುಮಾರಿಯರಿಗಂತೂ ಈಗ ಇನ್ನೊಂದು ಪೇಪರ್ ಕೊಡಬೇಕಾಗಿದೆ. ಅದು ಬರೆಯುವುದಲ್ಲ, ಆದರೆ ಪ್ರಾಯೋಗಿಕವಾದದ್ದು. ಈಗಂತೂ ಒಂದು ತಿಂಗಳ ತರಬೇತಿಯ ಫಲಿತಾಂಶದಲ್ಲಿ ಮೊದಲಿಗರಾಗಿದ್ದೀರಿ, ಆದರೆ ಅಂತಿಮ ಫಲಿತಾಂಶದಲ್ಲಿ ನಂಬರವನ್ ಬರಬಹುದು. ಆದರೆ ಅದಕ್ಕಾಗಿ ಯಾವ ಮುಖ್ಯ ಮಾತನ್ನು ಬುದ್ಧಿಯಲ್ಲಿ ಇಟ್ಟುಕೊಳ್ಳಬೇಕು. ತ್ಯಾಗ ಮತ್ತು ಸೇವೆಯಂತೂ ಇದೆ ಆದರೆ ಇನ್ನೊಂದು ಮುಖ್ಯ ಮಾತಿದೆ. ಎಲ್ಲಕ್ಕಿಂತ ದೊಡ್ಡ ಬಲಿದಾನ ಯಾವುದು ಮತ್ತು ಎಲ್ಲಕ್ಕಿಂತ ದೊಡ್ಡ ತ್ಯಾಗ ಯಾವುದು? ಬೇರೆಯವರ ಅವಗುಣಗಳನ್ನು ತ್ಯಾಗಮಾಡುವುದು.

ಎಲ್ಲಾ ಸೇವೆಗಳಲ್ಲಿ ದೊಡ್ಡದು ಯಾವುದು? ಶ್ರೇಷ್ಠ ಸೇವಾಧಾರಿಗಳು ಯಾವ ಮುಖ್ಯ ಸೇವೆಯನ್ನು ಮಾಡುವರು? ತೀವ್ರ ಪುರುಷಾರ್ಥಿಗಳು ತಮ್ಮ ತೀವ್ರ ಪುರುಷಾರ್ಥದ ಯಾವ ಪ್ರಮಾಣವನ್ನು ತೋರಿಸುವರು? ಯಾರೇ ಎದುರಿಗೆ ಬಂದರೂ ಅವರನ್ನು ಒಂದು ಕ್ಷಣದಲ್ಲಿ ಮರಜೀವಾ ಮಾಡುವುದು. ಒಂದೇ ಹೊಡೆತಕ್ಕೆ ಮುಗಿಸುವುದು, ಅದನ್ನೇ ಮಹಾಬಲಿಯೆಂದು ಕರೆಯುವರು. ಅರ್ಧಕ್ಕೆ ಬಿಡುವುದಲ್ಲ, ತಕ್ಷಣವೇ ಅವರನ್ನು ಬಲಿಕೊಡುವುದಕ್ಕೆ ಶ್ರೇಷ್ಠ ಸೇವೆಯೆನ್ನುತ್ತಾರೆ. ಈಗ ನೀವು ಬಾಣ ಬಿಡುತ್ತೀರಿ, ಹೊರಗೆ ಮತ್ತೆ ಪುನಃ ಅವರು ಜೀವಂತವಾಗುತ್ತಾರೆ. ಆದರೆ ಒಂದೇ ಕ್ಷಣದಲ್ಲಿ ದೃಷ್ಟಿಯಿಂದ ಪರಿವರ್ತನೆ ಮಾಡುವಂತಹ ಸಮಯ ಬರಲಿದೆ. ಈ ರೀತಿಯಿಂದ ಸೇವೆಯಲ್ಲಿ ಸಫಲತೆ ಮತ್ತು ಪ್ರಭಾವ ಬರುವುದು. ಈಗ ಮರಜೀವಾ (ಜೀವಂತ ಶವವನ್ನಾಗಿ) ಮಾಡುತ್ತೀರಿ ಆದರೆ ಮಹಾಬಲಿಯಾಗಿ ಅಲ್ಲ, ಅದಕ್ಕಾಗಿ ಎರಡು ಮಾತುಗಳ ಕೊರತೆಯದೆ ಅವುಗಳನ್ನು ಧಾರಣೆ ಮಾಡಿಕೊಂಡರೆ ಬೇರೆಯವರಿಗೂ ಅದೇ ಬಣ್ಣವನ್ನು ಹಚ್ಚಬಹುದು. ತಾವು ಮಹಾಬಲಿಯಾಗಿದ್ದೀರಾ? (ಮುರುಷಾರ್ಥಿಯಾಗಿದ್ದೇನೆ) ಅಲ್ಲಲ್ಲಿ

ತಪ್ಪುಗಳಾಗುತ್ತಿದ್ದರೆ ಅವರನ್ನು ಪುರುಷಾರ್ಥಿಯೆಂದು ಕರೆಯಲಾಗುತ್ತದೆಯೇ? ಇಂದಿನಿಂದ ನಾವು ಮಹಾಬಲಿಯಾಗಿದ್ದೇವೆ, ಈ ಹಳೆಯ ಜಗತ್ತಿನಲ್ಲಿ ಮತ್ತೆಂದೂ ಜೀವಂತವಾಗುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕು, ಸಾಹಸಿಗಳಿಗೆ ಸಹಯೋಗವೂ ಸಿಗುತ್ತದೆ. ಸಾಹಸದ ಕಾರಣ ಬಾಪ್ ದಾದಾರವರ ಸ್ನೇಹವಿರುತ್ತದೆ, ಎರಡು ಮಾತುಗಳ ಕೊರತೆಯ ಬಗೆಗೆ ಹೇಳುತ್ತಿದ್ದವು ಒಂದು ಏಕಾಂತವಾಸಿ ಮತ್ತು ಏಕತೆಯಲ್ಲಿ ಕಡಿಮೆಯಿರುತ್ತೀರಿ. ಏಕತೆ ಮತ್ತು ಏಕಾಂತದಲ್ಲಿ ಬಹಳ ಕಡಿಮೆ ಅಂತರವಿದೆ. ಸ್ಥೂಲ ಮತ್ತು ಸೂಕ್ಷ್ಮ ಈ ಎರಡು ಪ್ರಕಾರದ ಏಕಾಂತದ ಅವಶ್ಯಕತೆಯಿದೆ. ಏಕಾಂತದ ಆನಂದದ ಅನುಭವಿಗಳಾದರೆ, ಬಹಿರ್ಮುಖತೆ ಹಿಡಿಸುವುದಿಲ್ಲ. ಇನ್ನೂ ಬಹಿರ್ಮುಖತೆಯಲ್ಲಿ ಎಲ್ಲರ ಆಸಕ್ತಿಯಿದೆ. ಈ ಎರಡು ಮಾತುಗಳ ಕೊರತೆ ಅನೇಕರಲ್ಲಿದೆ. ಅವ್ಯಕ್ತ ಸ್ಥಿತಿಯನ್ನು ಹೆಚ್ಚಿಸಿಕೊಳ್ಳಲು ಇದರ ಅವಶ್ಯಕತೆ ಬಹಳ ಇದೆ. ಆದ್ದರಿಂದ ಏಕಾಂತದಲ್ಲಿ ರುಚಿ ಇಟ್ಟುಕೊಳ್ಳಬೇಕು. ಕುಮಾರಿಯರಿಗೆ ಈಗ ಪ್ರಾಯೋಗಿಕ ಕೋರ್ಸ್ ಕೊಡಲು ಹೋಗಬೇಕು.

ಈಗ ಸ್ನೇಹದ ಕಾಣಿಕೆಯಾಗಿ ಕುಮಾರಿಯರಿಗೆ ಮೂರು ಉಡುಗೊರೆಗಳನ್ನು ಕೊಡಬೇಕು. ಮೂರು ಸಂಬಂಧದಿಂದ ಮೂರು ಉಡುಗೊರೆಗಳನ್ನು ಕೊಡುತ್ತೇವೆ, ಅವುಗಳನ್ನೆಂದೂ ಮರೆಯಬಾರದು. ಬಾಪ್ ದಾದಾರವರ ಉಡುಗೊರೆಗಳನ್ನು ಸದಾ ತಮ್ಮ ಜೊತೆಗೆ ಇಟ್ಟುಕೊಳ್ಳಿ ಉಡುಗೊರೆಯನ್ನು ಬಚ್ಚಿಟ್ಟುಕೊಳ್ಳಲಾಗುತ್ತದೆಯಲ್ಲವೇ? ತಂದೆಯ ರೂಪದಿಂದ ಶಿಕ್ಷಣದ ಉಡುಗೊರೆ ನೆನಪಿಟ್ಟುಕೊಳ್ಳಿ. ಬಾಪ್ ದಾದಾ ಮತ್ತು ನಿಮಿತ್ತ ಸಹೋದರಿಯರು ಮತ್ತು ದೈವೀ ಪರಿವಾರಕ್ಕೆ ಆಜ್ಞಾಕಾರಿ, ಪ್ರಾಮಾಣಿಕರಾಗಿರಿ ಮತ್ತು ಶಿಕ್ಷಕನ ರೂಪದಲ್ಲಿ ಯಾವ ಶಿಕ್ಷಣ ಉಡುಗೊರೆಯಾಗಿ ಸಿಗುತ್ತದೆ? ಶಿಕ್ಷಣವನ್ನು ಗ್ರಹಿಸಲಾಗುತ್ತದೆಯಲ್ಲವೇ? ಎಲ್ಲಿಯೇ ಹೋದರೂ ಜ್ಞಾನಗ್ರಹಣ ಮಾಡುವುದು ಮತ್ತು ಗುಣಗ್ರಾಹಕತೆಯ ಪಾಠವನ್ನು ಸದಾ ಮತ್ತು ಗುರುವಿನ ರೂಪದಲ್ಲಿ ಸದಾ ಒಂದೇ ಮತ, ಏಕರಸ ಮತ್ತು ಒಬ್ಬನ ನೆನಪಿನಲ್ಲಿರಬೇಕಾದುದೇ ಶಿಕ್ಷಣವಾಗಿದೆ.

ವಿಷ್ಣುವಿಗೆ ಏನು ಅಲಂಕಾರಗಳನ್ನು ತೋರಿಸಲಾಗಿದೆಯೋ ಅವುಗಳನ್ನು ಈಗ ಶಕ್ತಿರೂಪದಲ್ಲಿ ಧಾರಣೆ ಮಾಡಬೇಕಾಗಿದೆ. ಈ ಅಲಂಕಾರಗಳನ್ನು ಸದಾ ತಮ್ಮ ಸಮ್ಮುಖದಲ್ಲಿರಿಸಿಕೊಳ್ಳಿ. ವಿಶೇಷ ಕುಮಾರಿಯರಿಗಾಗಿ ತಂದೆ , ಶಿಕ್ಷಕ ಮತ್ತು ಸದ್ಗುರು ಈ ಮೂರು ಸಂಬಂಧಗಳಿಂದ ಶಿಕ್ಷಣದ ಉಡುಗೊರೆ ಕೊಟ್ಟಿರುವರು. ಈಗ ನೋಡೋಣ ಯಾರು-ಯಾರು ಈ ಉಡುಗೊರೆಯನ್ನು ಜೊತೆ ಇಡುತ್ತಾರೆ ಎಂದು.

ಆ ಜನರೂ ರಿಫೈನ್ ಬಾಂಬ್ ತಯಾರಿಸುತ್ತಿದ್ದಾರೆ. ನೀವೂ ಸಹ ರಿಫೈನ್ ಬಾಂಬ್ ಹಾಕಬೇಕು. ಇರುವೆ ಮಾರ್ಗದ ಸೇವೆಯನ್ನು ಬಹಳ ಮಾಡಿದಿರಿ. ಬಾಂಬ್ ಹಾಕುವುದರಿಂದ ಬೇಗನೇ ಸ್ವಚ್ಛವಾಗುವುದು, ಆದ್ದರಿಂದ ವಿಶೇಷ ಧ್ವನಿವಪಿಸುವಂತಹ ಸೇವೆ ಮಾಡಬೇಕು, ಅದನ್ನೇ ಬಾಂಬ್ ಹಾಕುವುದು ಎನ್ನುತ್ತಾರೆ. ಯಾರು ಎಷ್ಟು ರಿಫೈನ್ ಆಗಿರುವರೋ ಅವರು ಅಷ್ಟು ಬೇರೆಯವರ ಮೇಲೆ ರಿಫೈನ್ ಬಾಂಬ್ ಹಾಕುವರು, ಈಗ ಸರ್ವತೋಮುಖ ಸೇವಾಧಾರಿಗಳಾಗಬೇಕು. ಎಷ್ಟೆಷ್ಟು ಆಗುವಿರೋ ಅಷ್ಟಷ್ಟು ಸತ್ಯಯುಗದ ಪರಿವಾರಕ್ಕೆ ಸಮೀಪ ಬರುವಿರಿ. ಸರ್ವತೋಮುಖವಾಗಿ ಸೇವೆ ಮಾಡಿ ತಮ್ಮ ವ್ಯಕ್ತಿತ್ವದ ಪರಿಚಯವನ್ನು ಕೊಟ್ಟಾಗ ತರಬೇತಿಯ ಪೂರ್ಣ ಫಲಿತಾಂಶ, ಪ್ರಾಯೋಗಿಕ ಕೋರ್ಸ್‌ನ ನಂತರ ಫಲಿತಾಂಶವನ್ನು ನೋಡುತ್ತೇವೆ. ಇನ್ನೂ ತರಬೇತಿ ಪೂರ್ಣವಾಗಿಲ್ಲ. ಪ್ರಾಯೋಗಿಕವಿನ್ನೂ ಇದೆ. ಒಂದು ತಿಂಗಳ ನಂತರ ಮಧುಬನಕ್ಕೆ ಬರುವಾಗ ಒಬ್ಬರೇ ಬರಬಾರದು. ಯಾರಿಗಾದರೂ ಮಾರ್ಗದರ್ಶಿಯಾಗಿ ಬರಬೇಕು, ಯಾತ್ರಿಕರನ್ನು ಕರೆತರಬೇಕು, ಬಾಪದಾದಾರವರಿಗೆ ಈ ಕುಮಾರಿಯರ ಬಗೆಗೆ ಬಹಳ ಭರವಸೆಯಿದೆ. ಭರವಸೆಯ ರತ್ನಗಳನ್ನು ತಂದೆ ಕಣ್ಣುಗಳಲ್ಲಿ ಸಮಾವೇಶಗೊಳಿಸಿಕೊಳ್ಳುತ್ತಾರ. ಒಳ್ಳೆಯದು!

ಅವ್ಯಕ್ತ ಮುರಳಿ 16-06-1969.

***ಅತಿ ದೊಡ್ಡ ತ್ಯಾಗ ಅವಗುಣಗಳ ತ್ಯಾಗ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ನೇಹ ಮತ್ತು ಶಕ್ತಿ ಈ ಎರಡು ಗುಣಗಳ ಮಿಲನದೊಂದಿಗೆ ಆತ್ಮ ಮತ್ತು ಪರಮಾತ್ಮ ಮಿಲನವನ್ನು ಅಮರವಾಗಿ, ಅವಿನಾಶಿಯಾಗಿ ಮಾಡಿಕೊಂಡಿದ್ದೇನೆ.

2. ನಾನು ಇತರರ ಅವಗುಣಗಳನ್ನು ತ್ಯಾಗ ಮಾಡುವ ಉನ್ನತ ತ್ಯಾಗಿ.

3. ನನ್ನ ಎದುರಿಗೆ ಯಾರು ಬಂದಾಗಲೂ ಒಂದು ಸೆಕೆಂಡಿನಲ್ಲಿ ಒಂದೇ ಹೊಡೆತಕ್ಕೆ ಮರುಜೀವಿಯಾಗಿ ಮಾಡುವ, ಶ್ರೇಷ್ಠ ಸೇವೆಯನ್ನು ಮಾಡುತ್ತಿದ್ದೇನೆ.

4. ನಾನು ಏಕಾಂತವಾಸಿಯಾಗಿ ಏಕತೆಯಲ್ಲಿ ಸದಾ ಇರುತ್ತಿದ್ದೇನೆ.

5. ನಾನು ತಂದೆಯ ರೂಪದಲ್ಲಿ ಶಿಕ್ಷಣದ ಉಡುಗೊರೆಯನ್ನು ಪಡೆದು, ಸದಾ ಬಾಪ್ ದಾದಾರವರೊಂದಿಗೆ ಮತ್ತು ಎಲ್ಲರೊಂದಿಗೆ ಆಜ್ಞಾಕಾರಿಯಾಗಿ ಮತ್ತು ಪ್ರಾಮಾಣಿಕವಾಗಿ ಇದ್ದೇನೆ.

6. ಶಿಕ್ಷಕನ ರೂಪದಲ್ಲಿ ಶಿಕ್ಷಣದ ಉಡುಗೊರೆಯನ್ನು ಪಡೆದು ಶಿಕ್ಷಣವನ್ನು ಸದಾ ಜ್ಞಾನ ಗ್ರಾಹಕನಾಗಿ, ಗುಣಗ್ರಾಹಕನಾಗಿ ಇದ್ದೇನೆ.

7. ಗುರುವಿನ ರೂಪದಲ್ಲಿ ಶಿಕ್ಷಣವನ್ನು ಪಡೆದು, ಸದಾ ಏಕಮತ, ಏಕೀರಸ ಮತ್ತು ಒಬ್ಬನ ಸ್ಮೃತಿಯಲ್ಲಿ ಇದ್ದೇನೆ.

8. ನಾನು ವಿಷ್ಣುವಿನ ಪ್ರತಿಯೊಂದು ಅಲಂಕಾರವನ್ನು ಶಕ್ತಿ ರೂಪದಲ್ಲಿ ಧಾರಣೆ ಮಾಡಿದ್ದೇನೆ.

9. ನಾನು ವಿಶೇಷವಾಗಿ ಧ್ವನಿ ವ್ಯಾಪಿಸುವ ಸೇವೆಯನ್ನು ಮಾಡಿ ಪರಿಶುದ್ಧವಾದ ಬಾಂಬ್ ನಿಂದ ಆಲ್ರೌಂಡರ್ ಸೇವೆ ಮಾಡಿದ್ದೇನೆ.

10. ನಾನು ಬಾಪ್ ದಾದಾರವರ ಆಶಾರತ್ನ ಮತ್ತು ನಯನ ರತ್ನ.